ಕೊಡುತ್ತದೆಂದರೆ, ಹನ್ನೆರಡೂವರೆ ಕೋಟಿ ರೂಪಾಯಿಯೋಜನೆ ಆದರಲ್ಲಿ ಕೇಂದ್ರ ಸರ್ಕಾರ 7 ಕೋಟಿ ರೂಪಾಯಿ ಬಿಡುಗಡೆ ಮಾಡಿ ಕೊಟ್ಟಿದೆಯೆಂದು ಹೇಳುತ್ತಾರೆ. ರೆವಿನ್ಯೂ ಖಾತೆಯಲ್ಲಿ ಕೇವಣಿಯಾಗಿ ಹಣ ಇಡಲಾಗಿದೆಯೆಂದು ಹೇಳುತ್ತಾರೆ. ರಾಜ್ಯ ಸರ್ಕಾರದಿಂದ ನೀಡಬೇಕಾಗಿರುವಂತಹ 8 ಕೋಟಿ ರೂಪಾಯಿಗಳಿಗೆ ಬಜೆಟ್‌ನಲ್ಲಿ ಯಾವುದೇ ತರಹ ಚಕಾರ ಎತ್ತಲಿಲ್ಲ. ಅಲ್ಲಿ ವಾಸಿಸುತ್ತಿರುವ 736 ಕುಟುಂಬಗಳಿಗೆ ನಾಗರೀಕ ಸವಲತ್ತುಗಳು ಇಲ್ಲ. ಆವರ ಆರೋಗ್ಯ ಕೆಟ್ಟು ಹೋದರೆ ಹೆಣ ಹೊತ್ತುಕೊಂಡು ಬರುವಹಾಗೆ ಆ ರೋಗಿಯನ್ನು ಎತ್ತುಕೊಂಡು ಬರುವಂತಹ ಸ್ಥಿತಿಯಿದೆ. ಆ ದೃಷ್ಟಿಯಿಂದ ಕಳೆದ ನಾಲ್ಕು ವರ್ಷಗಳಿಂದ ಒಂದೇ ರೀತಿಯ ಉತ್ತರ ನೀಡುತ್ತಿರುವಂತಹ ಈ ಸರ್ಕಾರಕ್ಕೆ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿರುವುದೇನೆಂದರೆ ಯಾವ ಕಾಲಕ್ಕೆ ಈ ತೀರ್ಮಾನ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ಉತ್ತರವನ್ನು ಅವರಿಂದ ನಿರೀಕ್ಷೆ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯಸದಸ್ಯರು ಎತ್ತಿರತಕ್ಕ ವಿಚಾರವನ್ನು ಸರ್ಕಾರ ಗಮನಿಸಿದೆ.

(ಬಿ) 1998-99ನೇ ಸಾಲಿನಲ್ಲಿ ಡ್ರಿಪ್ ಇರಿಗೇಷನ್‌ಗಾಗಿ ಬಿಡುಗಡೆ ಮಾಡಿರುವ ಹಣ.

+ಶ್ರೀ ಬಿ. ಶಿವರಾಂ :– ಮಾನ್ಯ ಉಪಾಧ್ಯಕ್ಷರೆ, 1998-99ನೇ ಸಾಲಿಗೆ ಕೇಂದ್ರ ಸರ್ಕಾರ ಡ್ರಿಪ್ ಇರಿಗೇಷನ್ 26 ಕೋಟಿ 55ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಆ ಹಣವನ್ನು ಒಟ್ಟು 20 ಜಿಲ್ಲೆಗಳಿಗೆ ಹಂಚಿತಕ್ಕ ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೆ ಹಂಚಿತಕ್ಕ ವಿಚಾರದಲ್ಲಿ ತಾರತಮ್ಯವಾಗಿದೆ ಎನ್ನತಕ್ಕ ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದು ನನ್ನ ಮೂಲಭೂತವಾದ ಪ್ರಶ್ನೆ. ಇವತ್ತು ಕೋಲಾರ ಮತ್ತು ಹಾಸನ ಜಿಲ್ಲೆಗಳಿಗೆ ಕೊಟ್ಟಿರತಕ್ಕದ್ದು ನೋಡಿದರೆ ಈ ಪ್ರಮಾಣದಲ್ಲಿ ಹಣ ಬಿಡುಗಡೆಯಾಗಿರತಕ್ಕದ್ದು ಇಪ್ಪತ್ತಾರೂವರೆ ಕೋಟಿಯಲ್ಲಿ ಕನಿಷ್ಟ ಸರಾಸರಿ ಒಂದೂಕಾಲು ಕೋಟಿ ಒಂದೊಂದು ಜಿಲ್ಲೆಗೆ ಬರಬೇಕಾದರೆ ನಮ್ಮ ಜಿಲ್ಲೆ ಹಾಸನಕ್ಕೆ ಬಂದಿರತಕ್ಕದ್ದು 75 ಲಕ್ಷ. ಕೋಲಾರ ಜಿಲ್ಲೆಗೆ ಬಂದಿರತಕ್ಕದ್ದು 52 ಲಕ್ಷ. ಈ ರೀತಿಯ ಒಂದು ವ್ಯತ್ಯಾಸ ಸರ್ಕಾರದ ಆದೇಶದಿಂದ ಆಗಿದೆ ನಾನು ಮೂಲಭೂತವಾಗಿ ಇದು ಒಂದೇ ಒಂದು ವಿಚಾರದಲ್ಲಿ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ ಡ್ರಿಪ್ ಇರಿಗೇಷನ್ ಯೋಜನೆಯಲ್ಲಿ ಸರ್ಕಾರ ಒಂದು ಪ್ರಕಟಣೆ ಮಾಡಿತ್ತು sky is the limit ಅಂತ. ಆದರೆ ಈಗ ಏನಾಗಿದೆ ರೈತರು ಈ ಸಾಲಿನಲ್ಲಿ ಮೊದಲು ಇವರು ಏನೊಂದು ಗುರಿಯನ್ನು ಕೊಟ್ಟಿದ್ದರು ಅದನ್ನು ಅನುಸರಿಸಿ ಈಗಾಗಲೇ ಡ್ರಿಪ್ ಇರಿಗೇಷನ್ ಯೋಜನೆಗಳನ್ನು ಸಣ್ಣ ಮತ್ತು ಅತಿಸಣ್ಣ ರೈತರು ಈಗಾಗಲೇ ಮಾಡಿಕೊಂಡಿದ್ದಾರೆ. ಮಾಡಿಕೊಂಡಿರತಕ್ಕ ಫಲಾನುಭವಿಗಳ ಪಟ್ಟಿಯನ್ನೂ ಕೂಡ ಹಾಸನ ಜಿಲ್ಲೆಯದು ಪೂರ್ಣವಾಗಿ ಇಲಾಖೆಯ ನಿರ್ದೇಶಕರಿಗೆ ಬಂದಿದೆ. ಹಣ ಬಿಡುಗಡೆಯಾಗಿರತಕ್ಕದ್ದು ಅದಕ್ಕೆ ತಕ್ಕಂತೆ ಇಲ್ಲ. ಈಗ ರೈತನ ಪರಿಸ್ಥಿತಿ ಏನಾಗಬೇಕು? ವಿಶೇಷವಾಗಿ ಏನಾಗಿದೆ 90 ಪರ್ಸೆಂಟ್ ಮಹಿಳೆಯರಿಗೆ ಸಹಾಯಧನ. 70 ಪರ್ಸೆಂಟ್

ಬೇರೆಯವರಿಗೆ ಸಹಾಯಧನ. ಈಗ ಅವರು ಹಣ ಹಾಕಿದ್ದಾರೆ, 90 ಪರ್ಸೆಂಟ್ ಮತ್ತು 70 ಪರ್ಸೆಂಟ್ ಯೋಜನೆಯಲ್ಲಿ ಹಣವನ್ನು ಬಿಡುಗಡೆ ಮಾಡಿಕೊಡದಿದ್ದರೆ ರೈತನ ಪರಿಸ್ಥಿತಿ ಏನಾಗುತ್ತದೆ? ಏನು ತಾರತಮ್ಯವಾಗಿದೆ ಹಣ ಬಿಡುಗಡೆಯಾಗಿ ಜಿಲ್ಲೆಗಳಿಗೆ ಹಂಚತಕ್ಕ ವಿಚಾರದಲ್ಲಿ, ಅದರ ಬಗ್ಗೆ ಕೃಷಿ ಮತ್ತು ತೋಟಗಾರಿಕೆ ಸಚಿವರು ದಯವಿಟ್ಟು ನಾನು ಕೇಳತಕ್ಕದ್ದು 1998-99ನೇ ಸಾಲಿಗೆ ವಿಶೇಷವಾಗಿ. ಹಿಂದಿನದನ್ನು ನಾನು ಹೇಳುತ್ತಿಲ್ಲ. ತಾವು ಹಿಂದಿನದನ್ನೆಲ್ಲಾ ಸೇರಿಸಿ ಹಂಚಿಕೆಯಲ್ಲಿ ವರ್ಷ ವರ್ಷಕ್ಕೂ ಗುರಿಯನ್ನು ಕೊಡತಕ್ಕ ನೀವು ಮೊದಲೇ ಏನಾದರೂ ಸರ್ಕಾರದಲ್ಲಿ ಗುರಿಯನ್ನು ಇದೇ ರೀತಿ ನಿಮ್ಮ ಜಿಲ್ಲೆಗೆ ಹಂಚುತ್ತೇವೆಂದರೆ ರೈತರು ಆ ಕೆಲಸಕ್ಕೆ ಹೋಗುತ್ತಿರಲಿಲ್ಲ. ತೋಟಗಾರಿಕಾ ಇಲಾಖೆಯವರು ಎಲ್ಲರಿಗೂ ಕೂಡ ನೀವು ಡ್ರಿಪ್ ಇರಿಗೇಷನ್ ಮಾಡಿಸಿಕೊಳ್ಳಿ ಮಾಡಿಸಿಕೊಳ್ಳಿಯೆಂದು ಹೇಳಿ ಈಗ ಅವರ ಪಟ್ಟಿಯೆಲ್ಲ ಬಂದು ಆದಮೇಲೆ ಹಿಂದೆ ಜಾಸ್ತಿ ಕೊಟ್ಟಿದ್ದೆವು ಮುಂದೆ ಜಾಸ್ತಿ ಕೊಡುತ್ತೇವೆ ಆ ಪ್ರಶ್ನೆಯಲ್ಲ. ಈ ವರ್ಷದಲ್ಲಿ ತಾವು ಹೇಳಿರುವ ರೀತಿಗೆ ತಕ್ಕಂತೆ ತಮ್ಮ ಇಲಾಖೆಯ ಅಧಿಕಾರಿಗಳು ಏನು ಕ್ಯಾನ್‌ವಾಸ್ ಮಾಡಿ ರೈತರಿಂದ ಈ ಯೋಜನೆಯನ್ನು ಮಾಡಿಸಿದ್ದಾರೆ ಅದಕ್ಕೆ ತಕ್ಕಂತಹ ಪ್ರಮಾಣದ ಹಣವನ್ನು 1998-99ನೇ ಸಾಲಿನಲ್ಲಿ ಸಮಾನವಾಗಿ ಎಲ್ಲರಿಗೂ ಎಲ್ಲಾ ಜಿಲ್ಲೆಗಳಿಗೆ ಹಂಚತಕ್ಕ ಕೆಲಸ ಆಗಬೇಕೆಂದು ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ :— ಮಾನ್ಯ ಉಪಾಧ್ಯಕ್ಷರೆ, ನಮ್ಮ ಇಲಾಖೆ ಅತಿ ಆಧುನಿಕವಾದ ಪದ್ಧತಿಯನ್ನು ಉಪಯೋಗಿಸಿ ನೀರಿನ ಬಳಕೆಯನ್ನು ಸರಿಯಾಗಿ ವಿನಿಯೋಗಿಸಲೆಂದೇ ಹನಿ ನೀರಾವರಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಇದನ್ನು ಹೆಚ್ಚು ಹೆಚ್ಚು ರೈತರಿಗೆ ಬಳಸಿಕೊಳ್ಳಲಿ ಎಂದು ತಿಳಿಸಿರತಕ್ಕದ್ದು ನಿಜ. ಅದರ ಅವಶ್ಯಕತೆ ಕೂಡ ಉಂಟು. ನೀರಿನ ಉಳಿತಾಯ ಕೂಡ ಉಂಟು ಆ ವಿವರಗಳಿಗೆ ನಾನು ಹೋಗುವುದಿಲ್ಲ. ಅದರಿಂದ ಇತ್ತೀಚೆಗೆ ಹೆಚ್ಚು ಹೆಚ್ಚು ರೈತರು ಈ ಸಾಧನವನ್ನು ಬಳಸಿಕೊಳ್ಳುವುದಕ್ಕೆ ಮುಂದಾಗುತ್ತಿದ್ದಾರೆ. ಇದು ಪೂರ್ತಿಯಾಗಿ ಕೇಂದ್ರ ಸರ್ಕಾರದಿಂದ ಪುರಸ್ಕೃತವಾದ ಯೋಜನೆ. ವರ್ಷೇ ವರ್ಷೇ ಇಷ್ಟಿಷ್ಟು ಹಣವೆಂದು ನಿಗದಿಪಡಿಸುತ್ತಿದ್ದಾರೆ. ನಮ್ಮ ರಾಜ್ಯ ಸರ್ಕಾರಕ್ಕೆ ಬಂದಿರತಕ್ಕ ಮೊತ್ತವನ್ನು ಮಾನ್ಯ ಸದಸ್ಯರಿಗೆ ಕೂಡ ಹೇಳಿದ್ದೇನೆ. ಈ ವಿವರಗಳನ್ನು ನಾನೇ ಅವರಿಗೆ ಒದಗಿಸಿ ಕೊಟ್ಟಿದ್ದೇನೆ. ಅವರು ಹೇಳಿರತಕ್ಕ ವಿಚಾರಗಳೆಲ್ಲಾ ನಾನೇ ಕೊಟ್ಟಿದ್ದು. ಅವರು ನನ್ನ ಹತ್ತಿರ ಬಂದಿದ್ದರು. ಈ ಚರ್ಚೆಯನ್ನೂ ಸಹ ಮಾಡಿದ್ದಾರೆ. ಹಣ ಬಿಡುಗಡೆ ಮಾಡಿರುವುದರಲ್ಲಿ ತಾರತಮ್ಯ ಮಾಡಿದ್ದಾರೆಂದು ಹೇಳಿದ್ದಾರೆ. ನಾವು ಯಾವುದೇ ತಾರತಮ್ಯ ಮಾಡಿಲ್ಲ. ಕಾರಣ ಏನೆಂದರೆ, ಎಲ್ಲೆಲ್ಲಿ ಬೇಡಿಕೆ ಹೆಚ್ಚು ಇದೆಯೋ, ಹಾಗೆ ಹೆಚ್ಚು ಬೇಡಿಕೆ ಇದ್ದಂತಹ ಜಿಲ್ಲೆಗಳಿಗೆ ಹೆಚ್ಚು ಅನುದಾನವನ್ನು ಕೊಟ್ಟಿದ್ದಾರೆ. ಸಾವಿರ ಅರ್ಜಿಗಳು ಇರುವ ಕಡೆ ಒಂದೇ ತರಹ, ನೂರು ಅರ್ಜಿಗಳು ಇರುವ ಕಡೆ ಒಂದೇ ತರಹ ಮಾಡುವುದಕ್ಕೆ ಆಗುವುದಿಲ್ಲ. ಹೆಚ್ಚು ಅರ್ಜಿಗಳು ಎಲ್ಲಿರತ್ತವೋ ಅಲ್ಲಿಗೆ ಹೆಚ್ಚಿಗೆ ಹಣವನ್ನು ಕೊಟ್ಟಿರತಕ್ಕದ್ದು, ಕಡಿಮೆ ಅರ್ಜಿಗಳು ಇರುವ ಕಡೆಗಳಿಗೆ ಕಡಿಮೆ ಹಣ ಕೊಟ್ಟಿರತಕ್ಕದ್ದು ಸಹ ಅದೊಂದು ಅಳತೆಗೋಲು ಇಟ್ಟುಕೊಂಡು ಹಣವನ್ನು ಬಿಡುಗಡೆ ಮಾಡಲಾಗಿದೆ. ಇದರಲ್ಲಿ ಯಾವುದೇ ತಾರತಮ್ಯ

ಆಗಿಲ್ಲವೆನ್ನತಕ್ಕ ಮಾತನ್ನು ಹೇಳಿ ಕೇಂದ್ರ ಸರ್ಕಾರಕ್ಕೆ ಈಗ ಮನವಿ ಮಾಡಿದ್ದೇವೆ. ಹೆಚ್ಚು ಹಣವನ್ನು ಈ ವರ್ಷ ನಮಗೆ ಕೊಡಬೇಕೆಂದು ಸುಮಾರು 40 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಬೇಕೆಂದು ನಾವು ಕೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೂ ಸಹ ಈ ವಿಚಾರದಲ್ಲಿ ಕೇಂದ್ರಸರ್ಕಾರಕ್ಕೆ ಪತ್ರವನ್ನು ಕೂಡ ಬರೆದಿದ್ದಾರೆ. ನಾನೂ ಸಹ ಇದರ ದಿನನಿತ್ಯ ಸಂಪರ್ಕದಲ್ಲಿದ್ದೇನೆ. ಈ ವರ್ಷಕ್ಕೆ ಇವತ್ತೊ ನಾಳೆಯೋ ಐದು ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬರತಕ್ಕ ಸಂಭವ ಕೂಡ ಇದೆ. ನಮಗೆ ಕೊಡಲಿಕ್ಕೆ ಎಷ್ಟು ಹಣ ಬೇಕಾಗಿದೆ ಅಷ್ಟು ಕೇಂದ್ರ ಸರ್ಕಾರದಿಂದ ಬಂದರೆ ಕೊಡುತ್ತೇವೆ. ಬರದಿದ್ದರೆ ಹೆಚ್ಚಿಗೆ ತರಿಸುವುದಕ್ಕೆ ಪ್ರಯತ್ನವನ್ನೂ ಕೂಡ ನಡೆಸಿದ್ದೇವೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ತಾರತಮ್ಯ ಮಾಡಿಲ್ಲ ಎನ್ನತಕ್ಕ ಮಾತನ್ನು ಮತ್ತೊಂದು ಸಾರಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

(೮) ಕೊಟ್ಟೂರು ಕ್ಷೇತ್ರದಲ್ಲಿ ಹೈಸ್ಕೂಲು ಮಂಜೂರಾತಿ.

ಶ್ರೀಮತಿ ಭಾಗೀರಥಮ್ಮ ಮರಳಸಿದ್ದನಗೌಡ (ಕೊಟ್ಟೂರು) :— ಮಾನ್ಯ ಉಪಾಧ್ಯಕ್ಷರೆ, ನಾನು ಹೇಳತಕ್ಕ ವಿಚಾರ ಹೈಸ್ಕೂಲನ್ನು ಮಂಜೂರು ಮಾಡುವಂತಹದ್ದು. ನಾನು ಪಾಸಕಿಯಾದ ನಂತರ ಹೈಸ್ಕೂಲ್ ಅನ್ನು ಸರ್ಕಾರ ಮಂಜೂರು ಮಾಡತಕ್ಕ ದಿನಗಳಲ್ಲಿ ನಾನು ಮಾನ್ಯ ಸಚಿವರನ್ನು ಕಂಡು ನನ್ನ ಕ್ಷೇತ್ರಕ್ಕೆ ಹೈಸ್ಕೂಲ್ ಮಂಜೂರು ಮಾಡಬೇಕೆಂದು ಕೇಳಿಕೊಂಡಿದ್ದೆ. ಆದರೆ ಇದು ನನಗೆ ಲಭ್ಯವಾಗಿಲ್ಲ. ನಂತರ ಮಾನ್ಯ ಸಚಿವರನ್ನು ಕಂಡಾಗ, ಮುಂದಿನ ವರ್ಷ ಕೊಡುವುದಾಗಿ ಅವರು ಭರವಸೆಯನ್ನು ಕೊಟ್ಟರು. ಇದೇ ವಿಚಾರವನ್ನು ನಾನು ನನ್ನ ಕ್ಷೇತ್ರದ ಜನಗಳಿಗೆ ಕೂಡ ಹೇಳಿದ್ದೇನೆ. ಆದರೆ ತಮಗೆ ಗೊತ್ತಿದೆ ಈ ವರ್ಷ ಅದು ಲಭ್ಯವಿಲ್ಲವೆಂದು ನನ್ನ ಕ್ಷೇತ್ರ ಹಿಂದುಳಿದ ಕ್ಷೇತ್ರವಾಗಿದ್ದು, ನಮ್ಮ ಆಸ್ತಿ ಕೇವಲ ವಿದ್ಯೆ ಮಾತ್ರ. ಈ ವರ್ಷದ ಅನುದಾನದಲ್ಲಿ ನನ್ನ ಕ್ಷೇತ್ರಕ್ಕೆ ಹೈಸ್ಕೂಲನ್ನು ಮಂಜೂರು ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಗಮನ ಸೆಳೆಯುತ್ತೇನೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ಪ್ರೌಢಶಾಲೆಗಳನ್ನು ಮಂಜೂರು ಮಾಡತಕ್ಕದ್ದು ಆವಶ್ಯಕತೆ ಮತ್ತು ಹಣದ ಲಭ್ಯತೆಯನ್ನು ಅನುಸರಿಸಿ ಮಂಜೂರು ಮಾಡತಕ್ಕದ್ದು ಸರ್ಕಾರ ಕ್ರಮ. ಆ ರೀತಿಯಾಗಿ ಹಣದ ಲಭ್ಯತೆಯ ಮತ್ತು ಆವಶ್ಯಕತೆಯನ್ನು ಅನುಸರಿಸಿ ಇದರ ಬಗ್ಗೆ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎನ್ನತಕ್ಕಂಥ ಮಾತನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಬೀದರ್ ಪಟ್ಟಣದಲ್ಲಿ ಆಶ್ರಯ ಸಮಿತಿಯಿಂದ ಮನೆಗಳ ಮಂಜೂರಾತಿ.

ಶ್ರೀ ಸೈಯದ್ ಜುಲ್ಫೀಕರ್ ಹಷ್ಮಿ:— ಸಭಾಧ್ಯಕ್ಷರೇ, ನಮ್ಮ ಬೀದರ್ ಪಟ್ಟಣದಲ್ಲಿ ಆಶ್ರಯ ಮನೆಗಳದ್ದು ಟಾರ್ಗೆಟ್ ಏನು ಕೊಟ್ಟಿದ್ದಾರೆ, ಆ ಪ್ರಕಾರವಾಗಿ ಹಣ ಬಿಡುಗಡೆಯಾಗಿಲ್ಲ. ಈಗ ನಮ್ಮ ಸಮಸ್ಯೆ ಏನಾಗಿದೆ ಎಂದರೆ 7-800 ಟಾರ್ಗೆಟ್ ನಮ್ಮದು. ನಾವು ಮನೆ